11 Dodballapur Taluk—

1	Doddaballapur Egg Marketing	C.S.
2	Doddaballapur Taluk	M.P.C.S.
3	Chickabelavangala	C.S.
4	Hosahalli Circle	M.P.C.S.
5	Tubagere Circle	do
6	Melekote Circle	do
7	Rajaghatta Circle	do
8	Kasaba 1st Circle	do
9	Chennadevi Circle	do
10	Isthoor Circle	do
11	Dodhejjaji Circle	do
12	Doddabelavangala Circle	do
13	Sasalu 1st Circle	do
14	Jodi Arudi	C.S.
15	Ootadele	do
16	Doddaballapur Town Power Loom Textile Manufactures	do
17	Doddaballapur Taluk Hand Loom	do

STATEMENT 'C'.

BANGALORE DIVISION.

Statement showing the total share amount collected up to 1950 and the annual turnover of the societies during the year 1950-51.

Sl. No.	*Name of Taluk*	*Share amount collected*	*Total turnover*
1	Bangalore North..	1,12,821	34,30,713
2	Bangalore South ..	92,469	20,42,902
3	Devanahalli ..	66,806	13,74,268
4	Kanakapura ..	72,418	31,46,864
5	Doddaballapur ..	85,327	22,58,475
6	Nelamangala ..	84,473	10 15,367
7	Ramanagaram ..	58,151	22,46,955
8	Channapatna ..	2,72,232	24,88,356
9	Anekal ..	98,464	13,93,319
10	Magadi ..	1,08,766	27,05,052
11	Hosakote ..	1,10,300	20,73,044

ಶ್ರೀ ಎ. ವಿ. ನರಸಿಂಹರೆಡ್ಡಿ.—ನನ್ನ ಪ್ರಶ್ನೆಯ (ಬ) ಭಾಗಕ್ಕೆ, ಉತ್ತರವಾಗಿ ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ 32 ಸಹಕಾರ ಸಂಘಗಳು ಪಾರಂಭವಾದವು ಎಂದು ಹೇಳಲಾಗಿದೆ. ಆದರೆ ಅಲ್ಲಿ 10 ಸಂಘಗಳು ಮಾತ್ರ 1951-52ನೆಯ ಸಾಲಿನಲ್ಲಿ ಲಾಭದಾಯಕವಾಗಿ ಕೆಲಸ ಮಾಡುತ್ತಿವೆ ಎಂದು ತಿಳಿಸಲಾಗಿದೆ. ಮಿಕ್ಕನಂಘಗಳೇ ನಾಗಿವೆ?

ಶ್ರೀ ಎಚ್. ಸಿದ್ದವೀರಪ್ಪ.—ಯಾವ ಯಾವವು ಲಾಭದಾಯಕವಾಗಿ ಕೆಲಸಮಾಡುತ್ತಿವೆಯೆಂದು ವಂದಿಯಿಂದ ಕಂಡುಬಂದಿದೆಯೋ ಅವುಗಳನ್ನು ಮಾತ್ರ ತೋರಿಸಿದ್ದೇವೆ. ಮಿಕ್ಕವು ಅಷ್ಟು ಲಾಭದಾಯಕವಾಗಿ ಕೆಲಸ ಮಾಡುತ್ತಿಲ್ಲವೆಂದು ಭಾವಿಸಬಹುದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ದೊಡ್ಡಕನ್ನಹಳ್ಳಿ ಸಂಘದಲ್ಲಿ ನಷ್ಟವಾಗಿ ಅದನ್ನು ಮುಚ್ಚಿ ಎರಡು ವರ್ಷಗಳಾದುವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕೆ ನೋಟೀಸ್ ಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಮಂಡಿವಾಳದ ಮಲ್ಟಿ ಪರ್‌ಪಸ್ ಕೋ-ಆಪರೇಟಿವ್ ಸೊಸೈಟಿ ಲಾಭದಾಯಕವಾಗಿ ಕೆಲಸಮಾಡುತ್ತಿದೆ. ಆದರೂ ಅದನ್ನು ಈ ಪಟ್ಟಿಯಲ್ಲಿ ಸೇರಿಸದಿರಲು ಕಾರಣನೇನು?

ಶ್ರೀ ಎಚ್. ಸಿದ್ದವೀರಪ್ಪ.—ವರ್ಷ ವರ್ಷವೂ ಬ್ಯಾಲೆನ್ಸ್ ಷೀಟ್ ಕಳುಹಿಸುತ್ತಾರೆ. ತಾವು ಕೇಳಿರುವ ಸಾಲಿನಲ್ಲಿ ಅಲ್ಲಿಂದ ಬ್ಯಾಲೆನ್ಸ್ ಷೀಟ್ ಬಂದಿಲ್ಲ, ಆದರಿಂದ ಸೇರಿಸಿಲ್ಲ. ಈ ಸಂಘಗಳು ಕೆಲವು ವರ್ಷ ಲಾಭದಾಯಕವಾಗಿ ಕೆಲಸಮಾಡುತ್ತವೆ, ಕೆಲವು ವರ್ಷ ಲಾಭದಾಯಕವಾಗಿರುವುದಿಲ್ಲ. But I have given you the list. They were found to be working in a profitable manner.

ಶ್ರೀ ಎ. ವಿ. ನರಸಿಂಹರೆಡ್ಡಿ.—ಮಂಡಿವಾಳದ ಮಲ್ಟಿ ಪರ್‌ಪಸ್ ಕೋ-ಆಪರೇಟಿವ್ ಸೊಸೈಟಿ ಪ್ರಾರಂಭವಾದಾಗಿನಿಂದಲೂ ಈಗಲೂ ಲಾಭದಾಯಕವಾಗಿ ಕೆಲಸಮಾಡುತ್ತಿದೆ. ನಾನೂ ಅದರಲ್ಲಿದ್ದೇನೆ. ಅದು ನನಗೆ ಗೊತ್ತಿದೆ. ಇದನ್ನು ವಿಚಾರಮಾಡುತ್ತೀರಾ?

Sri H. SIDDAVEERAPPA.—I will get it examined. I shall be very happy if it is so.

Fair Price Depots in Mysore City.

Q.—36. Sri B. NARAYANASWAMY (Mysore City South).—

Will the Government be pleased to state:—

(*a*) the number of Fair Price Depots in Mysore City at present and the number of ration depots prior to August 1952;

(*b*) the total stock and off-take of rice, ragi, jola and wheat in Mysore City from August 1952 up to 1st January 1953 (a monthwar statement may be furnished);

(*c*) the total stock position and off-take of rice, ragi, jola and wheat in Mysore City from January 1952 up to 31st July 1952 (a monthwar statement may be furnished);

(SRI B. NARAYANASWAMY.)

(*d*) the total quantity of rice, millets and wheat surrendered from depots at the end of each month from 1st June 1952 to 1st February 1953 (monthwar statement may be furnished).

A.—Sri H. SIDDAVEERAPPA (Minister for Home and Industries).—

(*a*)—

	Depots.
(1) At present ..	110
(2) Prior to August 1952 ..	108

(*b*)—

	Rice		*Wheat*		*Millets*		
	Total stock at the beginning of the month	*Off-take*	*Total stock at the beginning of the month*	*Off-take*	*Total stock at the beginning of the month*	*Off-take*	
						Ragi	*Jola*
1952—							
August ..	2,989	6,450	9,037	5,161	14,434	66	4,809
September ..	3,283	7,731	2,731	3,563	12,114	84	4,125
October ..	5,111	8,022	3,702	3,174	11,160	101	4,760
November ..	7,622	8,256	3,317	3,280	12,031	89	5,056
December ..	2,951	8,474	1,910	3,386	10,564	2,517	1,278

(*c*)

[*In Pallas*]

	Rice		*Wheat*		*Millets*		
	Total stock at the beginning of the month	*Off-take*	*Total stock at the beginning of the month*	*Off-take*	*Total stock at the beginning of the month*	*Off take*	
						Ragi	*Jola*
1952—							
January ..	2,806	8,716	5,974	3,382	5,081	5,319	..
February ..	3,920	8,596	8,513	3,871	2,251	1,903	872
March ..	3,889	8,568	8,482	3,489	4,796	1,413	1,285
April ..	11,508	8,221	12,893	2,108	7,542	1,358	1,397
May ..	10,044	6,562	17,657	1,944	19,708	1,237	1,783
June ..	8,972	4,648	16,263	2,260	20,506	50	4,250
July ..	6,539	5,759	15,969	6,463	16,432	4,013	

(*d*) Statement appended below :

Statement showing the particulars of foodgrains surrendered by the depots at the end of each month from 1st June 1952 to 1st February 1953.

Month	*Food Grains in Tallas*		
	Rice	*Wheat*	*Millets*
At the end of—			
May 1952 ..	577	224	234
June 1952 ..	559	227	208
July 1952 ..	464	247	154
August 1952 ..	515	263	220
September 1952	360	229	223
October 1952 ..	175	210	235
November 1952	248	285	99
December 1952	221	260	152
January 1953 ..	395	165	133

ಶ್ರೀ ಬಿ. ನಾರಾಯಣಸ್ವಾಮಿ.—ಸ್ವಾಮಿ, ಮೈಸೂರು ನಗರದಲ್ಲಿ 1952ನೇ ಆಗಸ್ಟಿನಿಂದೀಚೆಗೆ ಡಿಪೋಗಳಿಂದ ಮಿಲೆಟ್ಸ್ ಆಫ್‌ಟೇಕ್ ಕಡಮೆಯಾಗುತ್ತಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಬಿ. ನಾರಾಯಣಸ್ವಾಮಿ.—ಡಿಪೋಗಳಲ್ಲಿ ತಿಂಗಳ ಕೊನೆಯಲ್ಲಿ ಸರೆಂಡರ್ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Mr. SPEAKER.—There is the answer.

ಶ್ರೀ ಬಿ. ನಾರಾಯಣಸ್ವಾಮಿ.—ಈ ರೀತಿ ಆಗುವುದಕ್ಕೆ ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಹೊರಗಡೆ ಎಷ್ಟು ದವಸ ಬೇಕೋ ಅಷ್ಟು ಜನರಿಗೆ ಸಿಕ್ಕುತ್ತಿದೆ, ಆದ ದರಿಂದ ಡಿಪೋಗಳಲ್ಲಿ ಖರ್ಚಾಗುವುದಿಲ್ಲ.

ಶ್ರೀ ಬಿ. ನಾರಾಯಣಸ್ವಾಮಿ.—ತಾವು ಈಚೆಗೆ ಮಿಲೆಟ್ಸ್ ಬೆಲೆ ಹೆಚ್ಚಿಸಿದ್ದರಿಂದ ಈ ರೀತಿ ಆಗಿದೆಯೆಂದು ಹೇಳಿದರೆ ಒಪ್ಪುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಬಿ. ನಾರಾಯಣಸ್ವಾಮಿ.—ಈ ರೀತಿ ಮಿಲೆಟ್ಸ್ ಬೆಲೆಯನ್ನು ಹೆಚ್ಚಿಸಿರುವುದು ಸರಿಯಲ್ಲವೆಂದು ಮೈಸೂರು ನಗರದ ಅನೇಕ ಸಂಘಗಳೂ ಸಂಸ್ಥೆಗಳೂ ಸರ್ಕಾರದಲ್ಲಿ ಅರಿಕೆ ಮಾಡಿವೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಕೆಲವರು ಮಾಡಿದ್ದಾರೆ.

ಶ್ರೀ ಬಿ. ನಾರಾಯಣಸ್ವಾಮಿ.—ತಾವು ಅವರಿಗೆ ತಮ್ಮ ಅಭಿಪ್ರಾಯವೇನೆಂಬ ಬಗ್ಗೆ ಸೂಕ್ತ ಉತ್ತರವನ್ನು ಕೊಡುವುದರ ಮೂಲಕ ತಿಳಿಸಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿದೆ.

ಶ್ರೀ ಬಿ. ನಾರಾಯಣಸ್ವಾಮಿ.—ಈಗ ತಾವು ಹೆಚ್ಚಿಸಿರುವ ಖರೀದಿಯನ್ನು ಕಡಮೆ ಮಾಡುತ್ತೀರಾ ?

Mr. SPEAKER.—He has stated that it is under consideration.

ಶ್ರೀ ಬಿ. ನಾರಾಯಣಸ್ವಾಮಿ.—ತೀರ್ಮಾನವಾಗಲು ಎಷ್ಟು ದಿವಸವಾಗುತ್ತದೆ ?

(ಉತ್ತರವಿಲ್ಲ)

ಶ್ರೀ ಬಿ. ನಾರಾಯಣಸ್ವಾಮಿ.—ಈ ರೀತಿ ಡಿಪೋಗಳಲ್ಲಿ ದವಸ ಖರ್ಚಾಗುವುದು ಕಡಮೆಯಾಗಿರುವುದರಿಂದ, ಸರೆಂಡರ್ ಮಾಡುವುದು ಹೆಚ್ಚಾಗುತ್ತಿರುವುದರಿಂದ ನಮಗೆ ನಷ್ಟವಾಗುತ್ತಿದೆಯೆಂದು ತಮ್ಮ ಅಧಿಕಾರಿಗಳು ಹೇಳಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವರು ಕೊಳ್ಳದೆ ಯಿದ್ದರೆ ನಮ್ಮ ಅಭ್ಯಂತರವಿಲ್ಲ.

ಶ್ರೀ ಬಿ. ನಾರಾಯಣಸ್ವಾಮಿ.—ಈ ರೀತಿ ಆಗುವುದರಿಂದ ತಮ್ಮ ದಾಸ್ತಾನು affect ಆಗುವುದಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ನಮಗೇ ಉಳಿಯುತ್ತದೆ.

ಶ್ರೀ ಬಿ. ನಾರಾಯಣಸ್ವಾಮಿ.—ಉಳಿದು ಹೋಗಿ ಕೊಳೆಯುತ್ತಿರುವುದರಿಂದ ಸರ್ಕಾರಕ್ಕೆ ನಷ್ಟವಾಗುವುದಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಕೊಳೆಯುತ್ತಿಲ್ಲ.

ಶ್ರೀ ಬಿ. ನಾರಾಯಣಸ್ವಾಮಿ.—ಜೋಳ ನವಾರು ಎಷ್ಟು ದಿವಸದವರೆಗೆ ಬಾಳುತ್ತದೆ, ಎಷ್ಟು ದಿವಸವಾದ ಮೇಲೆ ಕೆಟ್ಟು ಹೋಗುತ್ತದೆ ?

(No answer.)

Mr. SPEAKER.—You can put any other suppiementary.

ಶ್ರೀ ಬಿ. ನಾರಾಯಣಸ್ವಾಮಿ.—ಮೈಸೂರು ನಗರದಲ್ಲಿ ಆಹಾರ ಧಾನ್ಯಗಳ ಬೆಲೆ ಹೆಚ್ಚಿಸಿದ್ದರಿಂದ ಅದನ್ನು ಪ್ರತಿಭಟಿಸಿ ಅತ್ಯಪ್ಪಿ ತೋರಿಸುವ ಉದ್ದೇಶದಿಂದ ಕೆಲವು ದಿನಗಳಿಂದ ಸತ್ಯಾಗ್ರಹ ನಡೆಯುತ್ತಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಪ್ರತಿಭಟನೆ ಬಂದಿಲ್ಲ ; ಸತ್ಯಾಗ್ರಹ ಎನ್ನತಕ್ಕ ಒಂದು ಚಳುವಳಿ ನಡೆಯುತ್ತಿದೆ.

ಶ್ರೀ ಬಿ. ನಾರಾಯಣಸ್ವಾಮಿ.—ಆ ಸತ್ಯಾಗ್ರಹದ ವಿಚಾರದಲ್ಲಿ ತಮ್ಮ ಸಹಾನುಭೂತಿ ಇದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಬಿ. ನಾರಾಯಣಸ್ವಾಮಿ.—ಸ್ವಾಮಿ, ಈ ಸಂಬಂಧವಾಗಿ ಮೈಸೂರಿನಲ್ಲಿ ಸತ್ಯಾಗ್ರಹ, ಹರತಾಳ ಇತ್ಯಾದಿಗಳೆಲ್ಲ ನಡೆಯುತ್ತಿರುವುದು ತಮ್ಮ ಅವಗಾಹನೆಗೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿದೆ.

ಶ್ರೀ ಬಿ. ನಾರಾಯಣಸ್ವಾಮಿ.—ತಾವು ಬರುವ ತಿಂಗಳು ಎಂದರೆ ಏಪ್ರಿಲ್ 12ನೇ ತಾರೀಖಿನೊಳಗಡೆ ಮೈಸೂರಿಗೆ ಸಾಕಷ್ಟು ಆಹಾರ ಧಾನ್ಯಗಳನ್ನು ಸಂಬರಾಯಿಪಾಡದೆ ಇದ್ದರೆ ಅವರು ತಮ್ಮ ಆಜ್ಞೆಯನ್ನು ಪ್ರತಿಭಟಿಸತಕ್ಕ ಬಗ್ಗೆ ಒಂದು "fasting day observe" ಮಾಡಬೇಕೆಂದು ತೀರ್ಮಾನಮಾಡಿಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನನ್ನ ಗಮನಕ್ಕೇನೂ ಬಂದಿಲ್ಲ. ಪತ್ರಿಕೆಗಳಲ್ಲಿ ಆ ರೀತಿ ಇತ್ತೆಂಬುದನ್ನು ಕೇಳಿದ್ದೇನೆ.

ಶ್ರೀ ಬಿ. ನಾರಾಯಸ್ವಾಮಿ.—ಆ ರೀತಿ ನಡೆಯಲು ಅವಕಾಶಕೊಡದಂತೆ ತಾವು ಸಾರ್ವಜನಿಕರ ಬೇಡಿಕೆಗೆ ಮನ್ನಣೆ ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇದು ಮನ್ನಣೆಕೊಡತಕ್ಕ ಅಥವಾ ಬಿಡತಕ್ಕ ವಿಚಾರವಲ್ಲ. ಈಗಾಗಲೇ ನಾನು ಈ ಸಂಬಂಧವಾಗಿ ಎಲ್ಲ ವಿಷಯಗಳನ್ನೂ ಸಭೆಯ ಮನಕರಗುವ ಹಾಗೆ ವಿಜ್ಞಾಪಿಸಿಕೊಂಡಿರುತ್ತೇನೆ.

ಶ್ರೀ ಬಿ. ನಾರಾಯಣಸ್ವಾಮಿ.—ಮೈಸೂರಿನ ಮಹಾಜನರೂ ಸರ್ಕಾರದವರ ಮಾನಕರಗತಕ್ಕ ರೀತಿಯಲ್ಲಿ ಬೇಡಿಕೊಂಡರೆ ಅದನ್ನು ತಾವು ಸರಿಪಡಿಸುತ್ತಿರಾ ?

Sri H. SIDDAVEERAPPA.—It is not due to lack of our sympathy. I have made it repeatedly clear that it is due to reasons beyond my control that I am not able to comply with that request.

ಶ್ರೀ ಬಿ. ನಾರಾಯಣಸ್ವಾಮಿ. — ಇಷ್ಟೊಂದು, ಚಳುವಳಿ, ಸತ್ಯಾಗ್ರಹ ಮುಂತಾದುವುಗಳನ್ನು ಜನರು ಮೈಸೂರಿನಲ್ಲೂ, ಇನ್ನೂ ಇತರ ಅನೇಕ ಕಡೆಗಳಲ್ಲೂ ಮಾಡುತ್ತಿದ್ದಾರೆ. ತಾವು ಅವರ ಬೇಡಿಕೆಗಳಿಗೆ ಸರಿಯಾದ ಉತ್ತರಕೊಡಲಿಲ್ಲವೆಂದು, ಜನರಲ್ಲಿ ಒಂದು ಆಕ್ರೋಶ ಬಂದಿರುವುದು ತಮಗೆ ಗೊತ್ತಿದೆಯೇ ?

Sri H. SIDDAVEERAPPA.—It may be that some people may be expecting that we would comply with that request but it is beyond my control. I sympathise.

ಶ್ರೀ ಬಿ. ನಾರಾಯಣಸ್ವಾಮಿ.—ಅವರು ಕೊಟ್ಟಿರತಕ್ಕ ರೆಪ್ರೆಸೆಂಟೇಷನ್ನಿಗೆ ತಾವು ಒಂದು ಎಂಡಾರ್ಸ್‌ಮೆಂಟ್ ಕೊಟ್ಟಿದ್ದೀರಾ ? ಅದನ್ನು ಕೊಡಲು ತಮಗೇನು ಕಷ್ಟ ?

ಶ್ರೀ ಎಚ್. ಸಿದ್ದವೀರಪ್ಪ.—ಯಾವುದಕ್ಕೆ ಎಂಡಾರ್ಸ್‌ಮೆಂಟ್ ?

ಶ್ರೀ ಬಿ. ನಾರಾಯಣಸ್ವಾಮಿ —ತಾವು ಈಗ ಆಹಾರ ಧಾನ್ಯಗಳ ಬೆಲೆಯನ್ನು ಹೆಚ್ಚಿಸಿರತಕ್ಕ ಬಗ್ಗೆ, ಅದನ್ನು ತಗ್ಗಿಸಬೇಕೆಂದು ಮೈಸೂರು ನಗರದ ಸಾರ್ವಜನಿಕರು ಒಂದು ಠರಾವನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿರತಕ್ಕ ಸಂಬಂಧವಾಗಿ ಸರ್ಕಾರದವರು ಇನ್ನೂ ಜವಾಬ್ ಕೊಡದಿರುವುದರಿಂದ, ಆ ಬಗ್ಗೆ ಒಂದು ಎಂಡಾರ್ಸ್‌ಮೆಂಟ್ ಕೊಡುವಂತೆ ಮಾಡುತ್ತೀರಾ ?

Mr. SPEAKER.—Hon'ble Member is making a statement.

ಶ್ರೀ ಬಿ. ನಾರಾಯಣಸ್ವಾಮಿ.—ಇನ್ನೂ ಅನೇಕ ಕಡೆಗಳಿಂದ ತಾವು ಹೀಗೆ ಬೆಲೆಗಳನ್ನು ಏರಿಸಿರತಕ್ಕದ್ದು reasonable ಆಗಿಲ್ಲ ಎಂದು, ಮನವಿಗಳನ್ನು ಮತ್ತು ಠರಾವುಗಳನ್ನು ಮಾಡಿ ತಮಗೆ ಕಳುಹಿಸಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವುಗಳಿಗೆಲ್ಲಾ ಆಗಲೇ ತೀರ್ಮಾನ ಕೊಟ್ಟಿದ್ದೇವೆ.

ಶ್ರೀ ಬಿ. ನಾರಾಯಣಸ್ವಾಮಿ.—ಅನೇಕ ಮುನಿಸಿಪಲ್ ಮತ್ತು ಕಾರ್ಪೊರೇಷನ್ನಿನವರು ಈ ಬೆಲೆಗಳು ಬಹಳ ಹೆಚ್ಚಾಯಿತೆಂದು ತಮಗೆ ತಿಳಿಸಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಮುನಿಸಿಪಾಲಿಟಿಗಳಿಗೂ ಮತ್ತು ಆಹಾರ ಇಲಾಖೆಗೂ ಏನು ಸಂಬಂಧ ?

ಶ್ರೀ ಬಿ. ನಾರಾಯಣಸ್ವಾಮಿ.—ಅನೇಕ ಮುನಿಸಿಪಾಲಿಟಿಯವರ ಈ ಕಂಟ್ರೋಲುಗಳನ್ನೆಲ್ಲಾ ಡೀ-ಕಂಟ್ರೋಲ್ ಮಾಡಬೇಕೆಂದು ತಮಗೆ ಮನವಿಗಳನ್ನು ಕಳುಹಿಸಿರುವುದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಇದಕ್ಕೆ ಆಗಲೇ ನಾನು ಉತ್ತರಕೊಟ್ಟಿದ್ದೇನೆ.

ಶ್ರೀ ಎಚ್. ಎಸ್. ರುದ್ರಪ್ಪ.—ರೇಷನಿಂಗ್ ಏರಿಯದಲ್ಲಿ ರೇಷ್ಕಾರ್ಡು ಹೋಲ್ಡರುಗಳ ಪೈಕಿ ಖಾಸಗಿ ಜನರು ಎಷ್ಟುಮಂದಿ ಇದ್ದಾರೆ ? ಸರ್ಕಾರಿ ನೌಕರರು ಎಷ್ಟುಮಂದಿ ಇದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮೈಸೂರಿನಲ್ಲಿ ಜನರು ನಡೆಸುತ್ತಿರುವ ಸತ್ಯಾಗ್ರಹ, ಪ್ರೊಜೆಸ್ಟ್ ಇತ್ಯಾದಿಗಳ ಬಗ್ಗೆ ಸಾರ್ವಜನಿಕರ ಸಹಾನುಭೂತಿ ಅದಕ್ಕೆ ಇಲ್ಲವೆಂಬ ಅಂಶ ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಕೊಳ್ಳತಕ್ಕ ಬೆಲೆಗೂ ಮತ್ತು ಮಾರತಕ್ಕ ಬೆಲೆಗೂ ಯಾವ ವ್ಯತ್ಯಾಸವೂ ಇರಬಾರದಲ್ಲವೇ ?

Sri H. SIDDAVEERAPPA.—We are still giving some subsidy even to-day.

ಶ್ರೀ ಆರ್. ಅನಂತರಾಮಚಾರ್.—ಫಾರ್ಮಲ್ ರೇಷನಿಂಗ್ ಏರಿಯಾದಲ್ಲಿ ಎಷ್ಟುಜನ ಕಾರ್ಡು ಹೋಲ್ಡರ್ಸ್ ಗಳಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಆರ್. ಅನಂತರಾಮಚಾರ್.—ರೇಷ್ಕಾರ್ಡು ಹೋಲ್ಡರುಗಳಿಗೆ ತಾವು ಒದಗಿಸುತ್ತಿರುವ ಗೋಧಿ ಹುಳಿತುಹೋಗಿರುತ್ತದೆಯೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ, ಆಂಥದಕ್ಕೆಲ್ಲ ಅವಕಾಶಕೊಡದಂತೆ ನೋಡಿಕೊಳ್ಳಲು ಸಿಬ್ಬಂದಿ ಇದೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ತಾವು ಡಿಪೋಗಳಲ್ಲಿ ಈಗ ರಾಗಿಯನ್ನು ಮಾರುತ್ತಿರುವ ಬೆಲೆಗಿಂತಲೂ ಕಪ್ಪು ಬೆಲೆಯಲ್ಲಿ ರಾಗಿ ಹೊರಗಡೆ ಮಾರಾಟವಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಬಂದಿದೆ.

ಶ್ರೀ ಎಸ್. ಗೋಪಾಲಗೌಡ.—ಈ ಒಂದು ತರಹ ಚಳುವಳಿ ಬಹಳ ದಿವಸಗಳಿಂದಲೂ ನಡೆಯುತ್ತಿದೆ ಅಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ತಾವು ಹೇಗೆ ಪ್ರಶ್ನೆ ಕೇಳುತ್ತೀರೋ ಹಾಗೆಯೇ ನಾನು ಉತ್ತರ ಹೇಳುತ್ತೇನೆ. ಈ ಒಂದು ತರಹ ಚಳುವಳಿ ಸುಮಾರು ಕೆಲವು ತಿಂಗಳುಗಳಿಂದ ಇದೆ.

ಶ್ರೀ ಎಸ್. ಗೋಪಾಲಗೌಡ.—ಸರ್ಕಾರ ಇದನ್ನು ಗಮನಿಸಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಈಗತಾನೆ ಕೊಟ್ಟ ಉತ್ತರ, ಇದಕ್ಕೆ ಅನ್ವಯಿಸುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಜನರು ಅಲ್ಲಲ್ಲೇ ಈ ಸಂಬಂಧವಾಗಿ ಮಾಡುತ್ತಿರುವ ಸತ್ಯಾಗ್ರಹದ ಬಗ್ಗೆ ದೇಶದಲ್ಲಿರತಕ್ಕ ಜನರ ಸಹಾನುಭೂತಿಯಿಲ್ಲವೆಂದು ತಮಗೆ ಯಾರಾದರೂ ತಿಳಿಸಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಯಾರೂ ತಿಳಿಸಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಹಾಗಿದ್ದರೆ ದೇಶದಲ್ಲಿರತಕ್ಕ ಜನರ ಸಹಾನುಭೂತಿ, ಆ ಸತ್ಯಾಗ್ರಹಗಳ ಬಗ್ಗೆ ಇಲ್ಲವೆಂದು ತಾವು ಹೇಗೆ ಉತ್ತರ ಕೊಟ್ಟಿರಿ ?

ಶ್ರೀ ಎಚ್. ಸಿದ್ದವೀರಪ್ಪ.—ಯಾವಾಗ ಹಾಗೆ ನಾನು ಉತ್ತರ ಕೊಟ್ಟಿದ್ದು ?

ಶ್ರೀ ಎಸ್. ಗೋಪಾಲಗೌಡ.—ಈಗ ಸ್ವಲ್ಪ ಹೊತ್ತಿನ ಮುಂಚೆ ತಾವು ಇಲ್ಲೇ ಹಾಗೆ ಹೇಳಲಿಲ್ಲವೇ ?

Sri H. SIDDAVEERAPPA.—As administrators we feel the pulse of the people. We understand what is what and who is who and we form our opinion.

ಶ್ರೀ ಎಸ್. ಗೋಪಾಲಗೌಡ.—ಇತ್ತೀಚೆಗೆ ಜನರ ಸಹಾನುಭೂತಿ ಇನ್ನೂ ಹೆಚ್ಚುತ್ತಿದೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಎಕ್. ಹುಚ್ಚಮಾಸ್ತಿಗೌಡ.—ಈ ದಿವಸ ಮೈಸೂರಿನಲ್ಲಿ open marketನಲ್ಲಿ ದವಸ ಸಿಕ್ಕುತ್ತಿದೆಯಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎಕ್. ಹುಚ್ಚಮಾಸ್ತಿಗೌಡ.—ಆದಕಾರಣ ಈಗ ಅಲ್ಲಿರುವ ಆಹಾರ ಡಿಪೋಗಳನ್ನು ಮುಚ್ಚಿಸುವುದು ಸೂಕ್ತವಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಆಲೋಚನೆ ಮಾಡೋಣ.

Loss sustained by Government on account of food control.

Q.—546. Sri Y. M. CHANDRASEKHARAIAH (Kadur).—

Will the Government be pleased to state:—

(*a*) the loss sustained by them last year on account of food control;

(*b*) the amount that might be saved this year as a result of relaxing the food control;

(*c*) the prices of foodgrains imported the quantity per reupee;

(*d*) the loss that would be incurred by selling them in the State?

A.—Sri H. SIDDAVEERAPPA (Minister for Home and Industries).—

(*a*)

	Rs.
Net Subsidy ..	29,52,486
Establishment charges* ..	37,82,648
Total ..	67,35,134†

(*b*) As the scheme of relaxation has come into effect only recently it is difficult to anticipate the probable savings, particularly as 1953 is likely to be a difficult year in view of the failure of rains in 1952-53 crop season.

(*c*) and (*d*)

	Cost per palla	*Cost in seers per rupee*	*Loss per palla*
	Rs. a.p.		Rs. a.p.
Imported rice	77 1 6	1 2/7	10 6 10
Orissa rice ..	53 15 4	1 8/9	..
Imported wheat.	55 2 3	1 4/5	1 0 3
Imported milo	37 2 0	2 2/3	3 12 3
Hyderabad jowar.	43 13 4	2 3/11	10 8 0
M.P. jowar..	40 11 3	2 7/16	7 5 11
M.B. jowar..	42 7 6	2 6/17	9 2 2
Orissa ragi ..	33 8 6	3	0 3 2

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ನಿಮಗೆ ಸಬ್ಸಿಡಿಯಿಂದ 29,52,486 ರೂಪಾಯಿಗಳೂ ಮತ್ತು ಸಿಬ್ಬಂದಿಯ ವೆಚ್ಚದ ಬಗ್ಗೆ 37,82,648 ರೂಪಾಯಿಗಳೂ ಹೀಗೆ ಒಟ್ಟಿಗೆ 67,35,143 ರೂಪಾಯಿಗಳು ಲುಕ್ಸಾನಾಗುತ್ತದೆಂದು (ಎ) ಪ್ರಶ್ನೆಗೆ ಉತ್ತರಕೊಟ್ಟಿದ್ದೀರಿ. ಈ ಖರ್ಚುಗಳನ್ನು ಕಮ್ಮಿಮಾಡುವುದಕ್ಕಾಗುವುದಿಲ್ಲವೆ ?

ಅಧ್ಯಕ್ಷರು.—ಆ ಎರಡು ಖಾಕ್ಯಗಳೂ ಅಲ್ಲಿ ಕೊಟ್ಟಿರತಕ್ಕ ಉತ್ತರದಲ್ಲೇ ಇವೆ. ಅವುಗಳನ್ನ ಕೈಬಿಟ್ಟು ತಾವು ಕೇಳತಕ್ಕ ಪ್ರಶ್ನೆಯನ್ನು ಕೇಳಬಹುದಾಗಿತ್ತು.

ಶ್ರೀ ಎಚ್. ಸಿದ್ದವೀರಪ್ಪ.—ಈಬಾಬನ್ನು ಸಂಪೂರ್ಣವಾಗಿ ಕಿತ್ತುಹಾಕದ ವಿನಾ ಖರ್ಚನ್ನು ಕಮ್ಮಿಮಾಡುವುದಕ್ಕಾಗುವುದಿಲ್ಲ. 52-53 ಮತ್ತು 53-54ರಿಂದೀಚೆಗೆ ಖರ್ಚುಗಳು ಬಹಳಮಟ್ಟಿಗೆ ಕಮ್ಮಿಯಾಗಿರುತ್ತವೆ. ಆದರೆ ಇದನ್ನು ಸಂಪೂರ್ಣವಾಗಿ ಅಬಾಲಿಷ್ ಮಾಡತಕ್ಕ ಕಾಲ ಇನ್ನೂ ಬಂದಿಲ್ಲ. ನಾವು ಒರಿಸ್ಸಾದಿಂದ ಕೂಡ ಇನ್ನೂ ಅಕ್ಕಿ ತರಿಸುತ್ತಿದ್ದೇವೆ. ಅವರು ನಮಗೆ 5,000 ಟನ್ ಕಳುಹಿಸಿಕೊಡುತ್ತಾರೆ. ಅಂದರೆ ಇದು ಸುಮಾರು 5 ಸಾವಿರ ಪಲ್ಲಾ ಆಗುತ್ತೆ. ನಮಗೆ ಬೇಕಾಗಿರತಕ್ಕದ್ದು 12 ಲಕ್ಷ ಪಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ನಮ್ಮ ರೈತರಿಗೆ ತಾವೇಕೆ ಆ ಬೆಲೆಯನ್ನು ಕೊಡುವುದಿಲ್ಲ ?

ಶ್ರೀ ಎಚ್. ಸಿದ್ದವೀರಪ್ಪ.—ನಾವು ಭತ್ತಕ್ಕೆ ಕೊಡತಕ್ಕ ಧಾರಣೆಯಿಂದ ಜನರು ಸಂತೃಪ್ತರಾಗಿದ್ದಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ತಾವು ಮಾರಾಟ ಮಾಡುವ ಬೆಲೆಯಲ್ಲಿ ಲಾಭ ಸೇರಿಸಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇದರಲ್ಲಿ ಆ ಲಾಭದ ಪ್ರಶ್ನೆಯೇ ಏಳುವುದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ತಾವು ರಾಗಿ ದೊರೆಯದಿರುವ ಕಡೆ ಮಾತ್ರ ಡಿಪೋಗಳನ್ನು ಮಾಡಿರುತ್ತೀರೋ ಅಥವ ಕೆಲಕೆಲವು ಕಡೆ ಮಾತ್ರ ಡಿಪೋಗಳನ್ನು ಮಾಡಿರುತ್ತೀರೋ ?

ಶ್ರೀ ಎಚ್. ಸಿದ್ದವೀರಪ್ಪ.—52-53ನೆಯ ಸಾಲಿನಿಂದ ಡಿಪೋಗಳ ಸಂಖ್ಯೆಯನ್ನು ಇನ್ನೂ ಜಾಸ್ತಿ ಮಾಡಲಾಗಿದೆ.

---

* Including Dearness and High Price Allowances.

† This is exclusive of interest on capital.